# PAPER-II
# KANNADA

**Signature and Name of Invigilator**

1. (Signature) ____________________________

   (Name) ____________________________

2. (Signature) ____________________________

   (Name) ____________________________

OMR Sheet No. : ..............................................

(To be filled by the Candidate)

Roll No. | | | | | | | | |

(In figures as per admission card)

Roll No.____________________________________

(In words)

**D 2 1 1 0**

Time : 1 $^1/_4$ hours] [Maximum Marks : **100**

Number of Pages in this Booklet : **12**

Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example :** (A) (B) ● (D)
   where (C) is the correct response.
5. Your responses to the items are to be indicated in the **Answer Sheet given inside the Paper I Booklet only.** If you mark at any place other than in the ovals in the Answer Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your name or put any mark on any part of the test booklet, except for the space allotted for the relevant entries, which may disclose your identity, you will render yourself liable to disqualification.
9. You have to return the test question booklet and OMR Answer sheet to the invigilators at the end of the examination compulsorily and must not carry it with you outside the Examination Hall.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के दीर्घवृत्त को पेन से भरकर काला करना है जैसा कि नीचे दिखाया गया है ।
   उदाहरण : (A) (B) ● (D)
   जबकि (C) सही उत्तर है ।
5. प्रश्नों के उत्तर केवल प्रश्न पत्र I के अन्दर दिये गये उत्तर-पत्रक पर ही अंकित करने हैं । यदि आप उत्तर पत्रक पर दिये गये दीर्घवृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप उत्तर-पुस्तिका पर अपना नाम या ऐसा कोई भी निशान जिससे आपकी पहचान हो सके, किसी भी भाग पर दर्शाते या अंकित करते हैं तो परीक्षा के लिये अयोग्य घोषित कर दिये जायेंगे ।
9. आपको परीक्षा समाप्त होने पर प्रश्न-पुस्तिका एवं OMR उत्तर-पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें ।
10. केवल नीले/काले बाल प्वाईंट पेन का ही इस्तेमाल करें ।
11. किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।
12. गलत उत्तरों के लिए कोई अंक काटे नहीं जाएँगे ।

# KANNADA
## Paper-II

**Note :** This paper contains **fifty (50)** objective type questions, each question carrying **two (2)** marks. Attempt all the questions.

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ ಐವತ್ತು (50) ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ ಎರಡು (2) ಅಂಕಗಳು. ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಿ.

ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು :

**1.** ಧರ್ಮ ಸಂಘರ್ಷವನ್ನು ಕುರಿತ ಶಾಸನ
(A) ಬುಕ್ಕನ ಶಾಸನ
(B) ಬಾದಾಮಿ ಶಾಸನ
(C) ಗಂಗಾಧರಂ ಶಾಸನ
(D) ತಮ್ಮಟಕಲ್ಲು ಶಾಸನ

**2.** ಇದೊಂದು ಷಟ್ಪದಿ ಕೃತಿ
(A) ಮಲ್ಲಿನಾಥ ಪುರಾಣ
(B) ಶಾಂತಿ ಪುರಾಣ
(C) ಬಸವ ಪುರಾಣ
(D) ಅಜಿತ ಪುರಾಣ

**3.** ಜೈನ ಧರ್ಮದ ಪ್ರೇರಣೆಯಿಂದ ಬಂದ ಕೃತಿ
(A) ಜಗನ್ನಾಥ ವಿಜಯ
(B) ಸಮಯ ಪರೀಕ್ಷೆ
(C) ಮಂತ್ರಗೋಪ್ಯ
(D) ನಳ ಚರಿತ್ರೆ

**4.** ದುರ್ಗ ಸಿಂಹನಿಗೆ ಆಶ್ರಯ ನೀಡಿದ ಅರಸ
(A) ಚಾಲುಕ್ಯ ತೈಲಪ
(B) ಚಾಲುಕ್ಯ ಜಗದೇಕ ಮಲ್ಲ
(C) ಹೊಯ್ಸಳ ನರಸಿಂಹ
(D) ಚಾಲುಕ್ಯ ಜಯಸಿಂಹ

**5.** ಭಟ್ಟ ನಾರಾಯಣನ ಕೃತಿಯಿಂದ ಪ್ರಭಾವಿತಗೊಂಡ ಕೃತಿ
(A) ಧರ್ಮಾಮೃತ
(B) ಸಾಹಸ ಭೀಮ ವಿಜಯ
(C) ಶಬರ ಶಂಕರ ವಿಳಾಸ
(D) ವೀರೇಶ ಚರಿತೆ

**6.** ಸರಸ್ವತಿಯ ಭಂಡಾರದ ಬೀಗ ಮದ್ರೆಯನ್ನು ಒಡೆದುದಾಗಿ ಹೇಳಿಕೊಂಡ ಕವಿ.
(A) ರನ್ನ (B) ಜನ್ನ
(C) ಪೊನ್ನ (D) ಪಂಪ

**7.** ಸೋಮನಾಥ ಚರಿತೆ ಕಾವ್ಯವನ್ನು ಬರೆದ ಕವಿ
(A) ಪಾಲ್ಕುರಿಕೆ ಸೋಮನಾಥ
(B) ಕನಕದಾಸ
(C) ಹರಿಹರ
(D) ರಾಘವಾಂಕ

**8.** ಮುದ್ದಣನು ರಚಿಸಿದ ಕೃತಿ
(A) ಪಂಪರಾಮಾಯಣ
(B) ಸೀತಾ ಕಲ್ಯಾಣ
(C) ಅದ್ಭುತ ರಾಮಾಯಣ
(D) ತೊರವೆ ರಾಮಾಯಣ

9. ‘ಪರಂಪರೆ ಮತ್ತು ವ್ಯಕ್ತ ಪ್ರತಿಭೆ’ಯನ್ನು ಪ್ರತಿಪಾದಿಸಿವ ಕವಿ ಚಿಂತಕ

(A) ಕಾಲ್ಡ್ ವೆಲ್

(B) ಟಿ. ಎಸ್. ಎಲಿಯಟ್

(C) ಬ್ರೆಕ್ಟ್

(D) ವರ್ಡ್ಸ್‌ವರ್ತ್

10. ಇದು ಕಾದಂಬರಿ ಪ್ರಕಾರಕ್ಕೆ ಸೇರಿದ ಕೃತಿ

(A) ಮಾಯಾಲೋಕ

(B) ತೆರೆದ ಬಾಗಿಲು

(C) ಕುಬಿ ಮತ್ತು ಇಯಾಲ

(D) ಉಪ್ಪುಕಡಲು

11. ‘ಹೊಕ್ಕುಳಲ್ಲಿ’ ಹೂವಿಲ್ಲ ಕೃತಿಯನ್ನು ರಚಿಸಿದವರು

(A) ಶ್ರೀ ಕೃಷ್ಣ ಆಲನಹಳ್ಳಿ

(B) ಎಚ್. ಎಂ. ಚನ್ನಯ್ಯ

(C) ಪಿ. ಲಂಕೇಶ್

(D) ಎ. ಕೆ. ರಾಮಾನುಜನ್

12. ಇದು ಶಂ. ಬಾ. ಜೋಷಿಯವರ ಕೃತಿ

(A) ಸಂಸ್ಕೃತಿ ಸಮೀಕ್ಷೆ

(B) ಹಾಲುಮತ ದರ್ಶನ

(C) ಸಂಶೋಧನ ತರಂಗ

(D) ಶೂನ್ಯ ಸಂಪಾದನೆಯ ಪರಾಮರ್ಶೆ

13. ‘ರೀತಿರಾತ್ಮಾಕಾವ್ಯಸ್ಯ’ - ಈ ಕಾವ್ಯ ತತ್ವದ ಪ್ರತಿಪಾದಕ

(A) ಮಮ್ಮಟ (B) ಕುಂತಕ

(C) ವಾಮನ (D) ದಂಡಿ

14. ಅನುಕರಣ ಸಿದ್ಧಾಂತ ಪ್ರತಿಪಾದಕರು

(A) ಅರಿಸ್ಟಾಟಲ್ (B) ಪ್ಲೇಟೋ

(C) ಹೊರೇಸ್ (D) ಲಾಂಜಿನಸ್

15. ಸ್ತ್ರೀ ವಾದದ ಚಿಂತನೆಯನ್ನು ಪ್ರತ್ರಿಪಾದಿಸಿ-ದವರು

(A) ರೇಮಂಡ್ ವಿಲಿಯಮ್ಸ್

(B) ಅರುಂಧತಿ ರಾಯ್

(C) ಎಫ್. ಆರ್. ಲೀವೀಸ್

(D) ಸಿಮೊನ್ ದಿಬೊವಾ

16. ‘ಭವ್ಯತೆ’ಯ ಪ್ರತಿಪಾದಕ

(A) ಕ್ರೋಚೆ

(B) ಲಾಂಜಿನಸ್

(C) ಸ್ಯಾಮುವೆಲ್ ಜಾನ್ಸನ್

(D) ಕೋಲ್ರಿಜ್

17. ಕನ್ನಡ ಭಾಷೆಯ ಪ್ರಾಚೀನತೆಗೆ ಆಧಾರವಾಗಿ ಗ್ರೀಕ್ ಪ್ರಹಸನದ ಪದಗಳನ್ನು ಉಲ್ಲೇಖಿಸಿದ ವಿದ್ವಾಂಸರು

(A) ಬಿ. ಎಂ. ಶ್ರೀಕಂಠಯ್ಯ

(B) ಶಂ. ಬಾ. ಜೋಷಿ

(C) ಗೋವಿಂದ ಪೈ

(D) ಎಫ್. ಕಿಟಲ್

18. 'ಪರ್ಶಿ, ಗರ್ದೆ' - ಈ ಪದಗಳು ಕನ್ನಡ ಭಾಷೆಯ ಯಾವ ಅವಸ್ಥೆಗೆ ಸೇರುತ್ತವೆ ?
(A) ನಡುಗನ್ನಡ
(B) ಹೊಸಗನ್ನಡ
(C) ಹಳಗನ್ನಡ
(D) ಪೂರ್ವದ ಹಳಗನ್ನಡ

19. ಕರ್ಮಧಾರಯ ಸಮಾಸಕ್ಕೆ ಉದಾಹರಣೆ ಯಾವುದು ?
(A) ಗಿಡಮರಬಳ್ಳಿಗಳು
(B) ಹೊಳೆನೀರು
(C) ಮುಖತಾವರೆ
(D) ಬೆಳ್ಗೊಡೆ

20. 'ಆಸ್ಪತ್ರೆ' - ಇದು ಯಾವ ಭಾಷೆಯಿಂದ ಬಂದ ಎರವಲು ಪದ ?
(A) ಪಾರಸಿ (B) ಪ್ರಾಕೃತ
(C) ಹಿಂದಿ (D) ಇಂಗ್ಲೀಷ್

ಬಹು ಆಯ್ಕೆ ಮಾದರಿ ಪ್ರಶ್ನೆಗಳು :

21. ಷಟ್ಪದಿ ಛಂದಸ್ಸಿನಲ್ಲಿ ಕೃತಿಗಳನ್ನು ರಚಿಸಿದವರು
I. ಕುಮಾರ ವ್ಯಾಸ ಮತ್ತು ರಾಘವಾಂಕ
II. ನಾಗಚಂದ್ರ ಮತ್ತು ಬ್ರಹ್ಮಶಿವ
III. ಭೀಮಕವಿ ಮತ್ತು ಲಕ್ಷ್ಮೀಶ
IV. ಚಾಮರಸ ಮತ್ತು ನಂಜುಂಡ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು IV (B) II ಮತ್ತು IV
(C) I ಮತ್ತು III (D) III ಮತ್ತು IV

22. ಈ ಕೆಳಗಿನ ಜೋಡಿ ಕವಿಗಳು ಅನುಕ್ರಮವಾಗಿ ಹತ್ತು ಮತ್ತು ಹನ್ನೆರಡನೆಯ ಶತಮಾನಕ್ಕೆ ಸೇರಿದವರು
I. ಪೊನ್ನ ಮತ್ತು ಜನ್ನ
II. ಚಾವುಂಡರಾಯ ಮತ್ತು ಸಿದ್ಧರಾಮ
III. ಒಂದನೆಯ ನಾಗವರ್ಮ ಮತ್ತು ಅಕ್ಕಮಹಾದೇವಿ
IV. ಭೀಮಕವಿ ಮತ್ತು ರತ್ನಾಕರ ವರ್ಣಿ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು IV (B) II ಮತ್ತು III
(C) II ಮತ್ತು IV (D) I ಮತ್ತು II

23. ಇವರು ಅಲಂಕಾರ ಗ್ರಂಥವನ್ನು ರಚಿಸಿದವರು
I. ಎರಡನೇ ನಾಗವರ್ಮ
II. ಕೇಶಿರಾಜ
III. ತಿರುಮಲಾರ್ಯ
IV. ಮಹೀಪತಿ ದಾಸ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು IV (B) II ಮತ್ತು III
(C) II ಮತ್ತು IV (D) I ಮತ್ತು III

24. ಇವು ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳು
I. ವಕ್ರೋಕ್ತಿ ಮತ್ತು ಔಚಿತ್ಯ
II. ಕೆಥಾರ್ಸಿಸ್ ಮತ್ತು ಮಾನಸಿಕ ದೂರ
III. ಅನುಕರಣ ಮತ್ತು ಭವ್ಯತೆ
IV. ವಸ್ತು ಪ್ರತಿರೂಪ ಮತ್ತು ರೀತಿ
ಇವುಗಳಲ್ಲಿ ಸರಿಯಾದ ಉತ್ತರ :
(A) II ಮತ್ತು III (B) I ಮತ್ತು III
(C) II ಮತ್ತು IV (D) I ಮತ್ತು IV

**25.** ಇವು ಕನ್ನಡ ದೇಸಿ ಪದಗಳು

I. ಮನೆ ಮತ್ತು ಬಾಗಿಲು

II. ಕಿಟಕಿ ಮತ್ತು ಅಲಮಾರು

III. ಕಾಗದ ಮತ್ತು ಜಾತ್ರೆ

IV. ಊರು ಮತ್ತು ಕೇರಿ

ಇವುಗಳಲ್ಲಿ ಸರಿಯಾದ ಉತ್ತರ ಃ

(A) I ಮತ್ತು III (B) II ಮತ್ತು III

(C) I ಮತ್ತು IV (D) II ಮತ್ತು IV

**26.** ಇವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವರು

I. ಯು. ಆರ್. ಅನಂತಮೂರ್ತಿ ಮತ್ತು ಪಿ. ಲಂಕೇಶ್

II. ಎಸ್. ಎಲ್. ಭೈರಪ್ಪ ಮತ್ತು ಕೆ. ಎಸ್. ನರಸಿಂಹಸ್ವಾಮಿ

III. ಗೀತಾ ನಾಗಭೂಷಣ ಮತ್ತು ಜಿ. ಎಸ್. ಆಮೂರ್

IV. ಡೀ. ಜವರೇ ಗೌಡ ಮತ್ತು ಹಂಪ ನಾಗರಾಜಯ್ಯ

ಇದರಲ್ಲಿ ಸರಿಯಾದ ಉತ್ತರ ಃ

(A) I ಮತ್ತು III (B) I ಮತ್ತು II

(C) III ಮತ್ತು IV (D) I ಮತ್ತು IV

**27.** ಇವು ಕನ್ನಡ ನಾಟಕ ಕೃತಿಗಳು

I. ಸಂಕ್ರಾಂತಿ ಮತ್ತು ಮುಕ್ತ

II. ನಾಗಮಂಡಲ ಮತ್ತು ಶೋಕ ಚಕ್ರ

III. ವಿಗಡ ವಿಕ್ರಮರಾಯ ಮತ್ತು ವೈಶಾಖ

IV. ನಾನೇಬಿಜ್ಜಳ ಮತ್ತು ಗುಣಮುಖ

ಇದರಲ್ಲಿ ಸರಿಯಾದ ಉತ್ತರ ಃ

(A) I ಮತ್ತು III (B) II ಮತ್ತು IV

(C) II ಮತ್ತು III (D) III ಮತ್ತು IV

**28.** ಪ್ರಥಮ ಪುರುಷವಾಚಕ ಸರ್ವನಾಮಗಳು

I. ಅವನು ಮತ್ತು ಅವಳು

II. ಅವರು ಮತ್ತು ಅವುಗಳು

III. ನಾನು ಮತ್ತು ನಾವು

IV. ನೀನು ಮತ್ತು ನೀವು

ಇವುಗಳಲ್ಲಿ ಸರಿಯಾದ ಉತ್ತರ ಃ

(A) I ಮತ್ತು III (B) II ಮತ್ತು III

(C) I ಮತ್ತು II (D) III ಮತ್ತು IV

**29.** ಇವು ಕನ್ನಡ ಸಂಶೋಧನ ಕೃತಿಗಳು

I. ಶಬ್ದ ವಿಹಾರ ಮತ್ತು ಊರು ಕೇರಿ

II. ವಾಗರ್ಥ ಮತ್ತು ಕಂನುಡಿಯ ಹುಟ್ಟು

III. ಗ್ರಾಮಾಯಣ ಮತ್ತು ಕನ್ನಡ ವರ್ಣಗಳು

IV. ಮಾರ್ಗ ಮತ್ತು ನಾಡೋಜ ಪಂಪ

ಇವುಗಳಲ್ಲಿ ಸರಿಯಾದ ಉತ್ತರ ಃ

(A) I ಮತ್ತು II

(B) II ಮತ್ತು III

(C) III ಮತ್ತು IV

(D) II ಮತ್ತು IV

**30.** ಇವು ಆತ್ಮಕಥನ ಕೃತಿಗಳು

I. ಅಣ್ಣನ ನೆನಪು

II. ಸಾರ್ಥಕ

III. ಹೋರಾಟದ ಬದುಕು

IV. ಸ್ಮೃತಿ ಪಟಲದಿಂದ

ಇವುಗಳಲ್ಲಿ ಸರಿಯಾದ ಉತ್ತರ ಃ

(A) II ಮತ್ತು IV (B) III ಮತ್ತು IV

(C) I ಮತ್ತು III (D) I ಮತ್ತು IV

## ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ

ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ.

ಧ್ಯಾನಾವೇಶಗಳಿಲ್ಲದೆ ನಿಜವಾದ ಕಾವ್ಯವಾಗದು. ಕಾವ್ಯವು ಕವಿಗೂ ಜಗತ್ತಿಗೂ ನಡೆಯುವ ಸಂಭಾಷಣೆ. ನಮ್ಮ ಹೃದಯದ ಪ್ರಶ್ನೆಗಳಿಗೆ ಅವನ ಹೃದಯವು ಉತ್ತರ ಕೊಡಬೇಕು ; ನಮ್ಮ ಗಾಯಗಳಿಗೆ ಅಲ್ಲಿ ತಕ್ಕ ಲೇಪನ ತೈಲ ದೊರೆಯಬೇಕು ; ನಮ್ಮ ಮಬ್ಬಿಗೆ ಅಲ್ಲಿ ಪಂಜಿರಬೇಕು. ಇದಾಗ ಬೇಕಾದರೆ ಅವನು ತಪಸ್ವಿಯಂಥವನಾಗಿರಬೇಕು. ರಾಮಾಯಣ ಬರೆದಾತನು ತನ್ನ ಮೈಮೇಲೆ ಹುತ್ತದ ಬೆಟ್ಟ ಬೆಳೆಯುವಷ್ಟು ಕಾಲ ಸಮಾಧಿಯಲ್ಲಿ ಕುಳಿತಿದ್ದನಂತೆ. ಭಾರತ ಬರೆದಾತನೂ ಹಾಗೆಯೇ ಮಹರ್ಷಿ, ತ್ರಿಕಾಲಜ್ಞಾನಿ ; ಧ್ಯಾನಯೋಗದಿಂದ ಎಲ್ಲವನ್ನೂ ಮನಸ್ಸಿನೊಳಗೇ ಪ್ರತ್ಯಕ್ಷ ಪಡಿಸಿಕೊಂಡಿದ್ದವನು. ನಮ್ಮ ಕುಮಾರವ್ಯಾಸನು ಕೂಡ ಅಂಥವನೇ ಎಂದು ಐತಿಹ್ಯ ಕಥೆಯಿಂದ ತೋರುತ್ತದೆ. ಆತನು ಕಾವ್ಯವನ್ನಾರಂಭಿಸುವುದಕ್ಕೆ ಮುಂಚೆ ಭಾರತಪ್ರಸಂಗ ವೆಲ್ಲವೂ (ಸಿನಿಮಾ) ಚಲಚ್ಚಿತ್ರದಂತೆ ಆತನ ಕಣ್ಣೆದುರಿಗೆ ಹಾಯ್ದಿತಂತೆ. "ಕವಿ" ಎಂಬ ಶಬ್ದಕ್ಕೆ "ವಿದ್ವಾನ್, ಬುಧಃ ಧೀರಃ ಪ್ರಾಜ್ಞಃ ಪಂಡಿತಃ, ಧೀಮಾನ್, ಧೀರ್ಘದರ್ಶೀ, ದೂರದರ್ಶೀ" ಎಂಬ ಅರ್ಥಗಳಿವೆ. ಋಷಿಯಲ್ಲ ದವನು ಕವಿಯಾಗಲಾರನಂತೆ – "ನಾನೃಷಿಃ ಕುರುತೇ ಕಾವ್ಯಂ". ಜಗತ್ಕರ್ತನೂ ವೇದಾಧಿಪತಿಯೂ ಆದ ಬ್ರಹ್ಮದೇವನನ್ನು "ಕವಿ" ಯೆಂದು ಹೊಗಳಿದ್ದಾರೆ. ಇದರಿಂದಲೇ ಕವಿಯ ಕರ್ತವ್ಯವು ಎಷ್ಟು ಗುರುತರವಾದು ದೆಂಬುದೂ, ಆತನಿಗೆ ಧ್ಯಾನಮನನಗಳು ಎಷ್ಟು ಅವಶ್ಯಕವೆಂಬುದೂ ಸೂಚಿತ ವಾಗುತ್ತವೆ. ಲೋಕದ ದೃಷ್ಟಿಗೆ ಹೊಸ ಹೊಸ ತತ್ತ್ವಗಳೂ ನೀತಿಗಳೂ ಹೊಳೆಯವಂತೆ ಮಾಡುವುದೇ ಆತನ ಕಾರ್ಯ. ಆದರೆ ಈ ಕಾರ್ಯವನ್ನು ಆತನು ಒಂದು ವಿಶೇಷ "ರೀತಿ"ಯಲ್ಲಿ ಮಾಡಬೇಕಾಗಿದೆ. ವಿವಿಧ ಶಾಸ್ತ್ರ ಕಾರರೂ, ಮತಬೋಧಕರೂ, ಅಧ್ಯಾತ್ಮ ವಿಚಾರಿಗಳೂ ಅದೇ ಕಾರ್ಯವನ್ನೇ ಮಾಡುವರಾದರೂ ಅವರ ದಾರಿ ಬೇರೆ. ಅವರು ಬುದ್ಧಿಯ ಮೂಲಕ ನಮ್ಮ ಅಂತರಂಗವನ್ನು ಹೊಗಲು ಯತ್ನಿಸುತ್ತಾರೆ ; ಅದು ಅನೇಕ ಸಂದರ್ಭಗಳಲ್ಲಿ ಕಷ್ಟತರವಾಗಿ ಕಾಣುತ್ತದೆ. ಕವಿಯು ನಮ್ಮ ಅಂತರಂಗವನ್ನು ಹೃದಯದ ಮೂಲಕ ಪ್ರವೇಶಿಸುತ್ತಾನೆ. ಇದು ಸಕಲ ಸಂದರ್ಭಗಳಲ್ಲಿಯೂ ಸುಲಭವಾಗಿ ನಡೆಯತಕ್ಕದ್ದು. ಸಂಗೀತ ಅಭಿನಯಗಳ ಸಹಾಯವಿದ್ದರೆ ಕವಿಯ ಕೆಲಸ ಮತ್ತಷ್ಟು ಸುಲಭವಾಗುತ್ತದೆ. ಕಾವ್ಯವು ವಾಸನೆ ಬಣ್ಣ ರುಚಿಗಳಿಲ್ಲದ ಒಂದು ದಿವ್ಯೌಷಧವನ್ನು ಕರಗಿಸಿಕೊಂಡಿರುವ ಹಾಲಿನಂತೆ ; ಗಾನಾಭಿನಯಗಳು ಅದರಲ್ಲಿ ಸೇರಿದ ದ್ರಾಕ್ಷಿ ಸಕ್ಕರೆಗಳಂತೆ. ನಾಟಕದಲ್ಲಿ ಈ ಮೂರೂ ಸೇರಿರುತ್ತವೆ. ಆದುದರಿಂದಲೇ "ನಾಟ್ಯಂ ಭಿನ್ನ ರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ". ಪುರಾಣಕೀರ್ತನೆಗಳಲ್ಲಿ ಕಾವ್ಯ ಸಂಗೀತಗಳೆರಡೂ ಸೇರಿರುತ್ತವೆ. ಆ ದಿವ್ಯೌಷಧವು ಮನುಷ್ಯನ ವರ್ತನೆಯನ್ನು ಉತ್ತಮಗೊಳಿಸಬಲ್ಲ ಒಂದು ನೀತಿಸೂಚನೆ ಅಥವಾ ತತ್ತ್ವವಿವೇಚನೆ ಅಥವಾ ಉದಾತ್ತ ಭಾವ ಪ್ರದರ್ಶನ. ಯಾವ ಸದ್ವೃತ್ತಿಯನ್ನು ವೇದಗಳು ಪ್ರಭುವಿನ ರೀತಿಯಲ್ಲಿ ನಮಗೆ ಆಜ್ಞಾಪಿಸುತ್ತವೆಯೋ, ಮತ್ತು ಸ್ಮೃತಿ ಪುರಾಣಗಳು ಸ್ನೇಹಿತನ ರೀತಿಯಲ್ಲಿ

ಉಪದೇಶಿಸುತ್ತವೆಯೋ, ಅದೇ ಸದ್ವೃತ್ತಿಯ ಕಡೆಗೇ ಕಾವ್ಯವು ಪ್ರಿಯಳ ರೀತಿಯಲ್ಲಿ ನಮ್ಮನ್ನು ಪ್ರೇರೇಪಿಸುವುದು – ಎಂದು ಒಬ್ಬ ಕವಿಯು ಹೇಳಿದ್ದಾನೆ. ಹೀಗೆಂದರೆ ಏನಾಯಿತು ? ಯಾವ ಕಾವ್ಯದಲ್ಲಿ ಕಲಿತು ಕೊಳ್ಳಲರ್ಹವಾದ ವಿಷಯವಿಶೇಷವಿಲ್ಲವೋ, ಯಾವ ಕಾವ್ಯವು ಅಮಿತ ಪದಗಳ ಮತ್ತು ಎರಕಹೊಯ್ದು ತೆಗೆದ ಅಲಂಕಾರಗಳ ಗುಡ್ಡೆಯೋ, ಅದು ಬರಿಯ ಬಡಾಯಿ ಬುರುಡೆಯೆಂಬುದು ನಿಶ್ಚಿತವಾಯಿತು. ಕಾವ್ಯ ಬರೆಯುವೆ ನೆಂದು ಕುಳಿತವನು – ಅವನಂತೆಯೇ ಇತರ ಗ್ರಂಥಕರ್ತನೂ – ಲೇಖನಿಯ ನ್ನೆತ್ತುವುದಕ್ಕೆ ಮುಂಚೆ, ಯಾವ ಪ್ರಯೋಜನಕ್ಕಾಗಿ ಲೇಖನಿಯನ್ನೆತ್ತ ಬೇಕೆಂಬುದನ್ನು ಗೊತ್ತುಮಾಡಿಕೊಳ್ಳ-ಬೇಕು. ಪದಗಳಿಗಾಗಿ ಹುಡುಕಾಡುವುದಕ್ಕೆ ಮುಂಚೆ ಅಭಿಪ್ರಾಯಗಳಿಗಾಗಿ ಚಿಂತಿಸಬೇಕು. ಬರೆದುದೂ ಅಚ್ಚಾದುದೂ ಎಲ್ಲವೂ ಗ್ರಂಥವಲ್ಲ. ಗ್ರಂಥದಲ್ಲಿ ಗ್ರಂಥಿ (ಗಂಟು) ಇರಬೇಕು ; ಎಂದರೆ ಬುದ್ಧಿಗೆ ಕೆಲಸವಿರಬೇಕು. ಅದು ಒಂದು ಹೊಸ ಜ್ಞಾನವನ್ನು ಕೊಡಬೇಕು ಅಥವಾ ಒಂದು ಹೊಸ ಅನುಭವವನ್ನು ತರಬೇಕು ; ಒಂದು ಹಳೆಯ ಸಂದೇಹವನ್ನು ಹೋಗಲಾಡಿಸಬೇಕು, ಅಥವಾ ಒಂದು ಹೊಸ ಚರ್ಚೆಯನ್ನು ಹುಟ್ಟಿಸಬೇಕು ; ಒಂದು ಜಡತೆಯನ್ನು ಕಳೆಯಬೇಕು, ಒಂದು ಹುರುಪನ್ನು ತುಂಬಬೇಕು. ಕವಿತ್ವದ "ರೀತಿ"ಯು ರಸವ್ಯುತ್ಪಾದಕ ವಾಗಿದ್ದರೆ "ಕೃತಿ" (Artistic) ಎನಿಸುತ್ತದೆ ; ರಸವನ್ನು ಬಿಟ್ಟ ಮಾತಿನ ಮೂಟೆಯಾದರೆ "ಕೃತಕ" (Artificail) ವಾಗುತ್ತದೆ. ಯಾವ ಕಾಲದಲ್ಲಿ ನಮ್ಮ ಕವಿಗಳು ಈ ಭೇದವನ್ನು ಮರೆತು ಶಬ್ದಾ ಡಂಬರವೇ ಸರ್ವಪ್ರಧಾನ ವೆಂದು ತಿಳಿದು, ವಿಷಯವಚನಗಳ ಪೂರ್ವಾಪರಕ್ರಮವನ್ನು ಲೆಕ್ಕಿಸದೆ, ಕೃತಿಯನ್ನು ಕೃತಕವನ್ನಾಗಿ ಮಾಡಿದರೋ, ಆ ದಿನ ನಮ್ಮ ಸಾಹಿತ್ಯಕ್ಕೂ ಜನಜೀವನಕ್ಕೂ ಇದ್ದ ಸಂಬಂಧವು ತಪ್ಪಿಹೋಯಿತು. ಅಂದಿನಿಂದ ಕವಿಗಳಿಗೆ ಜನದ ಆದರಣೆ ಇಲ್ಲವಾಯಿತು ; ಜನಕ್ಕೆ ಕವಿಗಳ ಉಪಕಾರವು ಇಲ್ಲವಾಯಿತು.

ಕತ್ತಿಯ ಚಲಕ್ಕಿಂತ ಲೇಖನಿಯ ಬಲವು ದೊಡ್ಡದೆಂದು ಇಂಗ್ಲೀಷಿನಲ್ಲಿ ಹೇಳುವರಲ್ಲವೆ ? ಜರ್ಮನೀದೇಶದ ಹೆಯಿನ್ ಎಂಬ ಕವಿಯು ತಾನು ಸತ್ತ ಬಳಿಕ ತನ್ನ ಸಮಾಧಿಯ ಮೇಲೆ ಪುಷ್ಪಮಾಲೆಯನ್ನಿಡುವುದಕ್ಕೆ ಪ್ರತಿಯಾಗಿ ಕತ್ತಿಯೊಂದನ್ನಿಟ್ಟು ಮನ್ನಣೆ ತೋರುವುದು ತನಗೆ ಇಷ್ಟವೆಂದು ಹೇಳಿದನಂತೆ. ಏಕೆಂದರೆ ಆತನು ಲೇಖನವೃತ್ತಿಯೆಲ್ಲವೂ ಒಂದು ಬಗೆಯ ಯುದ್ಧವೆಂದು ಭಾವಿಸಿದ್ದನು. ಲೋಕದಲ್ಲಿ ಅಜ್ಞಾನವೂ, ಅನ್ಯಾಯವೂ, ದೋಷವೂ, ದುಃಖವೂ ಅನಂತರೂಪಗಳನ್ನು ತಾಳಿ ವಿಜೃಂಭಿಸುತ್ತಿವೆ. ಅವುಗಳನ್ನು ಧ್ವಂಸಮಾಡುವುದೇ ಕವಿಗಳ ಮತ್ತು ಗ್ರಂಥಕರ್ತರ ಕೆಲಸ. ಸ್ಥೂಲದೇಹಧಾರಿಗಳಾದ ಶತ್ರುಗಳನ್ನು ಖಂಡಿಸುವುದು ಒರೆಯಿಂದೀಚೆಗೆ ಬಂದ ದೊಡ್ಡ ಅಲಗುಳ್ಳ ಕತ್ತಿ. ಸೂಕ್ಷ್ಮರೂಪದಿಂದ ದೇಹಿಗಳೊಳಗಿರುವ ಶತ್ರುಗಳನ್ನು ಖಂಡಿಸುವುದು ಮಶೀಪಾತ್ರೆಯಿಂದೀಚೆಗೆ ಬಂದ ಸಣ್ಣ ಮೊನೆಯ ಕತ್ತಿ. "ದೇಶದ ರಾಜಕೀಯ ಶಾಸನಗಳನ್ನು ಯಾರು ಬೇಕಾದರೂ ಮಾಡಿಕೊಂಡು ಹೋಗಲಿ ; ದೇಶೀಯರು ಹಾಡುವ ಹಾಡುಗಳನ್ನು ಮಾಡುವ ಪುಣ್ಯವು ನನಗೆ ಲಭಿಸಿದರೆ ಸಾಕು" ಎಂದು ಒಬ್ಬಾನೊಬ್ಬ ಪಾಶ್ಚಾತ್ಯ ಕವಿಯು ಹೇಳಿದನಂತೆ. ಜನರ ಮನೋಭಾವವನ್ನು ವ್ಯತ್ಯಾಸಗೊಳಿಸಿ ಅವರ ನಡೆನುಡಿಗಳನ್ನು ಬೇಕಾದ ದಾರಿಗೆ ತಿರುಗಿಸಲು ರಾಜ್ಯ ನಿಯಮಗಳಿಗಿಂತಲೂ ಕೃತಿಕೀರ್ತನಗಳಿಗೆ ಹೆಚ್ಚು

ಬಲವುಂಟೆಂಬುದೇ ಆತನ ಅಭಿಪ್ರಾಯ. ನಮ್ಮ ಹಿರಿಯರೂ ತಮ್ಮ ದಿನದಿನದ ನಡೆವಳಿಕೆಯಲ್ಲಿ ಪುರಂದರ, ಕನಕ, ಸರ್ವಜ್ಞ, ಸೋಮೇಶ್ವರ - ಇವರ ವಚನಗಳನ್ನು ಹೇಗೆಆಗಾಗ ನೆನೆದುಕೊಳ್ಳುತ್ತಿದ್ದರೆಂಬುದನ್ನು ನಾವು ಸ್ಮರಿಸಿದರೆ, ನಾನು ಈಗ ಉದಾಹರಿಸಿದ ವಾಕ್ಯವು ಎಷ್ಟು ಯುಕ್ತಿಯುಕ್ತವಾಗಿದೆ-ಎಂಬುದು ಗೊತ್ತಾಗುವುದು.

**31.** ಈ ಲೇಖನ ಪ್ರಧಾನ ಆಶಯ

(A) ಕಾವ್ಯವು ಮನುಷ್ಯನ ವರ್ತನೆಯ ಮೇಲೆ ಪರಿಣಾಮವನ್ನು ಬೀರುತ್ತದೆ.

(B) ಕಾವ್ಯವು ಮನುಷ್ಯನ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ.

(C) ಕಾವ್ಯಕ್ಕೂ ಮನುಷ್ಯನ ವರ್ತನೆಗೂ ಯಾವುದೇ ಸಂಬಂಧ ದಿಲ್ಲ.

(D) ಮನುಷ್ಯನ ವರ್ತನೆಯ ಕಾವ್ಯವನ್ನು ರೂಪಿಸುವುದು.

**32.** ಲೇಖಕರ ಅಭಿಮತದಂತೆ ಕವಿಯ ಕಾರ್ಯವೇನು ?

(A) ಕವಿಯ ಕಾರ್ಯವು ಅಂತರಂಗವನ್ನು ಪ್ರವೇಶಿಸುವುದಿಲ್ಲ.

(B) ಓದುಗರ ಬುದ್ಧಿಯನ್ನು ಪ್ರಖರಗೊಳಿಸುವುದಿಲ್ಲ.

(C) ಓದುಗರನ್ನು ಚಿಂತಕರನ್ನಾಗಿ ಮಾಡುವುದು ಕವಿಯ ಕಾರ್ಯವಲ್ಲ

(D) ಓದುಗರ ಅಂತರಂಗವನ್ನು ಹೃದಯದ ಮೂಲಕ ಪ್ರವೇಶಿಸುವುದು.

**33.** 'ಕೃತಿ' ಮತ್ತು 'ಕೃತಕ' ದಲ್ಲಿರುವ ಅಂತರವೇನು ?

(A) ಕೃತಿ ಮತ್ತು ಕೃತಕದಲ್ಲಿ ಏನೂ ಅಂತರವಿಲ್ಲ.

(B) ಕೃತಿ ಉದಾತ್ತವಾಗಿರುತ್ತದೆ ಕೃತಕ ಆಕರ್ಷಕವಾಗಿರುತ್ತದೆ.

(C) ಕೃತಿ ರಸವತ್ತಾಗಿರುತ್ತದೆ, ಕೃತಕ ರಸಹೀನ ಮಾತಿನ ಮೂಟೆಯಾಗಿ-ರುತ್ತದೆ.

(D) ಕೃತಿ ಬುದ್ಧಿಯನ್ನು ತುಂಬುತ್ತದೆ, ಕೃತಕ ಹೃದಯವನ್ನು ತಟ್ಟುತ್ತದೆ.

**34.** ಲೇಖನಿ ಏನು ಮಾಡುತ್ತದೆ ?

I. ಅಜ್ಞಾನ, ಅನ್ಯಾಯಗಳನ್ನು ಧ್ವಂಸ ಮಾಡುತ್ತದೆ.

II. ಲೇಖಕರಿಗೆ ಮನ್ನಣೆ ಸಿಗುವಂತೆ ಮಾಡುತ್ತದೆ.

III. ದೇಹದಲ್ಲಿ ಸೂಕ್ಷ್ಮರೂಪದಲ್ಲಿರುವ ಶತ್ರುಗಳನ್ನು ನಾಶ ಮಾಡುತ್ತದೆ.

IV. ಸ್ಥೂಲ ದೇಹಧಾರಿಗಳನ್ನು ನಿರ್ನಾಮ-ಗೊಳಿಸುತ್ತದೆ.

ಇವುಗಳಲ್ಲಿ ಸರಿಯಾದ ಉತ್ತರ.

(A) I ಮತ್ತು II (B) I ಮತ್ತು III

(C) II ಮತ್ತು III (D) III ಮತ್ತು IV

**35.** ಗ್ರಂಥ ರಚನೆಯ ಉದ್ದೇಶಗಳು

I. ಹೊಸ ಜ್ಞಾನವನ್ನು ಕೊಡುವುದು

II. ಸಂದೇಹವನ್ನು ಹೋಗಲಾಡಿಸುವುದು.

III. ಅರ್ಥ ಸಂಪಾದನೆ ಮಾಡುವುದು.

IV. ಜಡತೆಯನ್ನು ಹುಟ್ಟಿಸುವುದು.

ಇವುಗಳಲ್ಲಿ ಸರಿಯಾದ ಉತ್ತರ

(A) I ಮತ್ತು II (B) I ಮತ್ತು III

(C) II ಮತ್ತು III (D) III ಮತ್ತು IV

**ಹೇಳಿಕೆ-ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ**

**36.** **ಹೇಳಿಕೆ** : ಅನಿಲಾನಲ ಸಂಯೋಗಂ ಉರಿಪದಿರ್ಕುಮೆ ಪಗೆಯಂ.

**ವಿವರಣೆ** : ಗಾಳಿ, ಬೆಂಕಿಗಳ ಒಟ್ಟುಗೂಡುವಿಕೆ-ಯಿಂದ ಹಗೆಗಳು ನಾಶವಾಗ ಲಾರರು.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ಸರಿ ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ಸರಿ ವಿವರಣೆ ತಪ್ಪು

**37.** **ಹೇಳಿಕೆ** : ಉಳ್ಳವರು ಶಿವಾಲಯವ ಮಾಡುವರುನಾ ಏನ ಮಾಡಲಿ ಬಡವನಯ್ಯ !

**ವಿವರಣೆ** : ಶ್ರೀಮಂತರು ದೇವಾಲಯವನ್ನು ಕಟ್ಟಿಸುತ್ತಾರೆ ಬಡವನಾದ ನನ್ನಿಂದ ಸಾಧ್ಯ ವಿಲ್ಲ.

ಇವುಗಳಲ್ಲಿ ಸರಿಯಾದ ಉತ್ತರ

(A) ವಿವರಣೆ ತಪ್ಪು, ಹೇಳಿಕೆ ಸರಿ

(B) ವಿವರಣೆ ಸರಿ , ಹೇಳಿಕೆ ತಪ್ಪು

(C) ಹೇಳಿಕೆ ಸರಿ , ವಿವರಣೆ ಸರಿ

(D) ಹೇಳಿಕೆ ತಪ್ಪು , ವಿವರಣೆ ತಪ್ಪು

**38.** **ಹೇಳಿಕೆ** : "ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲ ಏತಕೆ ಬೇಕೋ !"

**ವಿವರಣೆ** : "ನೀನೂ ಬೇಡ, ನಿನ್ನ ಹಂಗೂ ಬೇಡ ನಿನ್ನ ಹೆಸರಿನ ಬಲ ವೊಂದೇ ಸಾಕು."

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ತಪ್ಪು ; ವಿವರಣೆ ಸರಿ.

(B) ಹೇಳಿಕೆ ತಪ್ಪು ; ವಿವರಣೆ ತಪ್ಪು

(C) ಹೇಳಿಕೆ ಸರಿ ; ವಿವರಣೆ ಸರಿ

(D) ಹೇಳಿಕೆ ಸರಿ ; ವಿವರಣೆ ತಪ್ಪು

**39.** **ಹೇಳಿಕೆ** : "ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡ-ವಾಗಿರು"

**ವಿವರಣೆ** : "ನೀನು ಎಲ್ಲಿಯೇ ಇದ್ದರೂ, ಹೇಗೆಯೇ ಇದ್ದರೂ ಯಾವಾಗಲೂ ಕನ್ನಡಿಗನಾಗಿರು"

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ಸರಿ ; ವಿವರಣೆ ತಪ್ಪು

(B) ಹೇಳಿಕೆ ಸರಿ ; ವಿವರಣೆ ಸರಿ

(C) ಹೇಳಿಕೆ ತಪ್ಪು ; ವಿವರಣೆ ಸರಿ

(D) ಹೇಳಿಕೆ ತಪ್ಪು ; ವಿವರಣೆ ತಪ್ಪು

**40.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಕೃಷ್ಣಮೂರ್ತಿಪುರಾಣಿಕ – ಮೈಮನಗಳ ಸುಳಿಯಲ್ಲಿ

(B) ತ.ರಾ.ಸು. – ಮಾಡಿಮಡಿದವರು

(C) ವಿ. ಎಂ. ಇನಾಂದಾರ – ನಾಲ್ಕನೆಯ ಆಯಾಮ

(D) ಶಾಂತಿನಾಥ ದೇಸಾಯಿ – ಮುಕ್ತಿ

41. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಚಾವುಂಡರಾಯ – ವಡ್ಡಾರಾಧನೆ

(B) ಬ್ರಹ್ಮಶಿವ – ಸಮಯ ಪರೀಕ್ಷೆ

(C) ಷಡಕ್ಷರಿ – ಬಸವ ಪುರಾಣ

(D) ಪುರಂದರದಾಸ – ನಳಚರಿತ್ರೆ

42. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆ ಆಗುವುದಿಲ್ಲ ?

(A) ಎಸ್.ವಿ. ರಂಗಣ್ಣ – ರಂಗ ಬಿನ್ನಪ

(B) ಬೆಟಗೇರಿ ಕೃಷ್ಣ ಶರ್ಮ – ನಲ್ವಾಡುಗಳು

(C) ಎಸ್.ವಿ. ಪರಮೇಶ್ವರ ಭಟ್ಟ – ಉಪ್ಪು ಕಡಲು

(D) ಚೆನ್ನವೀರ ಕಣವಿ – ನಾದ ಲೀಲೆ

43. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಭರತ – ರೀತಿ

(B) ಭಾಮಹ – ಅಲಂಕಾರ

(C) ಆನಂದವರ್ಧನ – ರಸ

(D) ವಾಮನ – ಧ್ವನಿ

44. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಗರತಿಯ ಹಾಡು – ಹಲಸಂಗಿ ಗೆಳೆಯರು

(B) ಬಯಲು ಸೀಮೆಯ ಲಾವಣಿಗಳು – ಕೆ.ವಿ. ಸುಬ್ಬಣ್ಣ

(C) ಅವರು ನೀಡಿದ ದೀಪ – ಜೀ.ಶಂ. ಪ

(D) ಆನ್ವಯಿಕ ಜಾನಪದ – ಲಕ್ಕಪ್ಪ ಗೌಡ

45. ಬಹು ಆಯ್ಕೆಯ ಜೋಡಣೆ

| | |
|---|---|
| (a) ಕಬ್ಬಿಗರ ಕಾವ | (i) ಶ್ರೀವಿಜಯ |
| (b) ಲೀಲಾವತಿ | (ii) ಆಂಡಯ್ಯ |
| (c) ಶಬ್ದಮಣಿದರ್ಪಣ | (iii) ನೇಮಿಚಂದ್ರ |
| (d) ಮುದ್ರಾ ಮಂಜೂಷ | (iv) ಕೇಶಿರಾಜ |
| | (v) ಕೆಂಪು ನಾರಾಯಣ |

ಇವುಗಳಲ್ಲಿ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (i) | (iii) | (ii) | (iv) |
| (B) | (iii) | (iv) | (v) | (ii) |
| (C) | (ii) | (iii) | (iv) | (v) |
| (D) | (v) | (ii) | (iii) | (i) |

46. ಬಹು ಆಯ್ಕೆಯ ಜೋಡಣೆ

| | |
|---|---|
| (a) ಕೆ. ವಿ. ಅಯ್ಯರ್ | (i) ನಾಲ್ಕನೇ ಆಯಾಮ |
| (b) ಮಿರ್ಜಿ ಅಣ್ಣಾರಾಯ | (ii) ಚಂದ್ರಗಿರಿ ತೀರದಲ್ಲಿ |
| (c) ಅನುಪಮಾ ನಿರಂಜನ | (iii) ಶಾಂತಲಾ |
| (d) ಸಾರಾ ಅಬೂಬಕರ್ | (iv) ಮಾಧವಿ |
| | (v) ನಿಸರ್ಗ |

ಇವುಗಳಲ್ಲಿ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (iii) | (v) | (iv) | (ii) |
| (B) | (i) | (iv) | (iii) | (v) |
| (C) | (v) | (iii) | (ii) | (i) |
| (D) | (iv) | (ii) | (i) | (v) |

47. ಬಹು ಆಯ್ಕೆಯ ಜೋಡಣೆ

| | |
|---|---|
| (a) ಒಂದನೇ ನಾಗವರ್ಮ | (i) ಕಾವ್ಯಪ್ರಕಾಶ |
| (b) ಸಾಳ್ವ | (ii) ಕಾವ್ಯಾವಲೋಕನ |
| (c) ತಿರುಮಲಾರ್ಯ | (iii) ಛಂದೋಂಬುಧಿ |
| (d) ಮಮ್ಮಟ | (iv) ರಸರತ್ನಾಕರ |
| | (v) ಅಪ್ರತಿಮ ವೀರ ಚರಿತೆ. |

ಇವುಗಳಲ್ಲಿ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (ii) | (iii) | (i) | (iv) |
| (B) | (i) | (v) | (ii) | (iii) |
| (C) | (iv) | (iii) | (i) | (v) |
| (D) | (iii) | (iv) | (v) | (i) |

ಅನುಕ್ರಮ ಮಾದರಿ

**ಈ ಕೆಳಗಿನ ಕಾಲಾನುಕ್ರಮ ಸರಣಿಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ**

48. (A) ರುದ್ರಭಟ್ಟ, ರತ್ನಾಕರ ವರ್ಣಿ, ಪೊನ್ನ, ನಯಸೇನ
(B) ನಯಸೇನ, ಪೊನ್ನ, ರತ್ನಾಕರ ವರ್ಣಿ, ರುದ್ರಭಟ್ಟ
(C) ಪೊನ್ನ, ನಯಸೇನ, ರುದ್ರಭಟ್ಟ, ರತ್ನಾಕರ ವರ್ಣಿ
(D) ರತ್ನಾಕರ ವರ್ಣಿ, ನಯಸೇನ, ಪೊನ್ನ, ರುದ್ರಭಟ್ಟ

49. (A) ಭೂಮಿಗೀತ, ಕದಳಿಯ ಕರ್ಪೂರ, ಇಂಗ್ಲೀಷ್ ಗೀತಗಳು, ಸಾವಿರಾರು ನದಿಗಳು
(B) ಇಂಗ್ಲೀಷ್ ಗೀತಗಳು, ಕದಳಿಯ ಕರ್ಪೂರ, ಭೂಮಿಗೀತ, ಸಾವಿರಾರು ನದಿಗಳು
(C) ಸಾವಿರಾರು ನದಿಗಳು, ಭೂಮಿಗೀತ, ಇಂಗ್ಲೀಷ್ ಗೀತಗಳು, ಕದಳಿಯ ಕರ್ಪೂರ,
(D) ಕದಳಿಯ ಕರ್ಪೂರ, ಸಾವಿರಾರು ನದಿಗಳು, ಭೂಮಿಗೀತ, ಇಂಗ್ಲೀಷ್ ಗೀತಗಳು,

50. (A) ವೀಣಾಶಾಂತೇಶ್ವರ, ಎಸ್. ಎಲ್. ಭೈರಪ್ಪ, ಕಡೆಂಗೊಡ್ಲು ಶಂಕರ ಭಟ್ಟ, ಡಿ. ಎಲ್. ನರಸಿಂಹಾಚಾರ್
(B) ಡಿ. ಎಲ್. ನರಸಿಂಹಾಚಾರ್, ಕಡೆಂಗೊಡ್ಲು ಶಂಕರ ಭಟ್ಟ, ವೀಣಾಶಾಂತೇಶ್ವರ, ಎಸ್. ಎಲ್. ಭೈರಪ್ಪ
(C) ಎಸ್. ಎಲ್. ಭೈರಪ್ಪ, ಡಿ. ಎಲ್. ನರಸಿಂಹಾ ಚಾರ್, ವೀಣಾಶಾಂತೇಶ್ವರ, ಕಡೆಂಗೊಡ್ಲು ಶಂಕರ ಭಟ್ಟ
(D) ಕಡೆಂಗೊಡ್ಲು ಶಂಕರ ಭಟ್ಟ, ಡಿ. ಎಲ್. ನರಸಿಂಹಾಚಾರ್, ಎಸ್. ಎಲ್. ಭೈರಪ್ಪ, ವೀಣಾಶಾಂತೇಶ್ವರ

**Space for Rough Work**